09.01.1979ರಂದು ಕೈಗೊಂಡ ನಿರ್ಣಯದಂತೆ ತಾತ್ಕಾಲಿಕ ಸಾಗುವಳಿ ಚೀಟಿ ಮಾತ್ರ ನೀಡಿದ್ದು ಖಾಯಂ ಸಾಗುವಳಿ ಚೀಟಿ ನೀಡುವ ಬಗ್ಗೆ ಈವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಸದರಿ ಸಮಿತಿಯ ಸಭೆ ಕರೆದು, ಆದೇಶಪಡೆದು ಖಾಯಂ ಸಾಗುವಳೀ ಚೀಟಿ ನೀಡುವ ಬಗ್ಗೆ ಅಗತ್ಯ ಕ್ರಮ ವಹಿಸಲಾಗುವುದು.

ಜಲಾಶಯಗಳಲ್ಲಿನ ನೀರಿನ ಪ್ರಮಾಣ

4 ಶ್ರೀ ಪಾಟೀಲ್ ಎ.ಎಸ್(ನಡಹಳ್ಳಿ, ದೇವರ ಹಿಪ್ಪರಗಿ)

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

1) ರಾಜ್ಯದಲ್ಲಿರುವ ಒಟ್ಟು ಎಷ್ಟು : ಜಲಾಶಯಗಳಿವೆ ಮತ್ತು ಸದರಿ ಜಲಾಶಯಗಳಲ್ಲಿ ಎಷ್ಟು ಪ್ರಮಾಣದಲ್ಲಿ ನೀರು ಸಂಗ್ರಹಿಸಬಹುದಾಗಿದೆ.

ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಜಲಾಶಯಗಳ ಒಟ್ಟು ಸಂಖ್ಯೆ: 63 ಈ ಜಲಾಶಯಗಳಲ್ಲಿ 649.55 ಟಿ.ಎಂ.ಸಿ. ನೀರು ಸಂಗ್ರಹಿಸಬಹುದಾಗಿದೆ.

2) ಸದರಿ ಎಲ್ಲಾ ಜಲಾಶಯಗಳಲ್ಲಿ ಹೂಳು ತುಂಬಿದೆಯೇ:

ಸದರಿ ಜಲಾಶಯಗಳ ಪೈಕಿ 7 ಜಲಾಶಯಗಳಲ್ಲಿ ಹೂಳಿನ ಸಂಗ್ರಹಣೆ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

3) ಹಾಗಿದ್ದಲ್ಲಿ ಅಂದಾಜು ಎಷ್ಟು ಪ್ರಮಾಣದಲ್ಲಿ ಹೂಳು ತುಂಬಿವೆ (ಪ್ರತಿ ಜಲಾಶಯವಾರು ವಿವರ ನೀಡುವುದು).

ಜಲಾಶಯಗಳಲ್ಲಿ ಸಂಗ್ರಹಣೆಗೊಂಡಿರುವ ಹೂಳಿನ ಪ್ರಮಾಣ

			ಟಿ.ಎಂ.ಸಿ.ಗಳಲ್ಲಿ
ತುಂಗಾಭಧ್ರಾ	28.131	ನಾರಾಯಣಪುರ	10.155
ಮಲಪ್ರಭಾ	2.77	ಆಲಮಟ್ಟಿ	5.309
ಭದ್ರಾ	2.152	ಹಿಪ್ಪರಗಿ	0.126
ಕೃಷ್ಣರಾಜಸಾಗರ	1.05		

4) ರಾಜ್ಯದ ಜಲಾಶಯಗಳ ಹೂಳೆತ್ತಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಪ್ರಸ್ತುತ ಬೆಳಗಾವಿ ಜಿಲ್ಲೆಯಲ್ಲಿ ಧೂಪದಾಳ್ ವಿಯರ್ ನಲ್ಲಿ ಹೂಳು ತೆಗೆಯುವ ಕಾರ್ಯವನ್ನು ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗಿದೆ. ಇದರ ಯಶಸ್ಸಿನ ನಂತರ ಇತರ ಜಲಾಶಯಗಳಲ್ಲಿ ಹೂಳು ತೆಗೆಯುವ ಕಾರ್ಯ ಕೈಗೊಳ್ಳಲು ಉದ್ದೇಶಿಸಲಾಗಿದೆ.

5) ಹೊಸಪೇಟೆಯ ತುಂಗಭದ್ರಾ ಜಲಾಶಯದ ನೀರು ಸಂಪೂರ್ಣ ಹಸಿರು ಬಣ್ಣಕ್ಕೆ ತಿರುಗಿ ಕಲುಷಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಸ್ವಚ್ಛತೆಗಾಗಿ ಯಾವ ಕ್ರಮ ಕೈಗೊಂಡಿದೆ?

ಹೌದು. ಈ ಹಿಂದೆ ಜಲಾಶಯದ ನೀರು ಹಸಿರು ಬಣ್ಣಕ್ಕೆ ತಿರುಗಿದ್ದು ಸರ್ಕಾರದ ಗಮನಕ್ಕೆ ಬಂದಿದೆ. ತುಂಗಭದ್ರಾ ಜಲಾಶಯವು ತುಂಗಭದ್ರಾ ಮಂಡಳಿಯ ವ್ಯಾಪ್ತಿಯಲ್ಲಿರುತ್ತದೆ. ಜಲಾಶಯದ ಸ್ವಚ್ಚತೆ ಬಗ್ಗೆ ತುಂಗಭದ್ರಾ ಮಂಡಳಿಯಿಂದ ಕ್ರಮ ಕೈಗೊಳ್ಳುವಂತೆ ಬಳ್ಳಾರಿ ಜಿಲ್ಲಾಧಿಕಾರಿಗಳು ಮಂಡಳಿಗೆ ಸೂಚನೆ ನೀಡಿರುತ್ತಾರೆ.

ಅನುಬಂಧ–1

ರಾಜ್ಯದಲ್ಲಿನ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ (ಜಲಾಶಯ)ಗಳ ವಿವರ

ಕ್ರ.ಸಂ	ಯೋಜನೆ	ಸಂಗ್ರಹಣಾ ಸಾಮರ್ಥ್ಯ (ಟಿ.ಎಂ.ಸಿ.ಗಳಲ್ಲಿ)
1	ತುಂಗಭದ್ರಾ ಯೋಜನೆ	111.51
2	ವಾಣಿವಿಲಾಸ ಸಾಗರ	30.02
3	ಭದ್ರಾ ಜಲಾಶಯ	71.54
4	ಘಟಪ್ರಭಾ	51.01
5	ಅಂಬ್ಲಿಗೋಳ	0.44
6	ಅಂಜನಾಪುರ	1.40
7	ಅರೆಶಂಕರ	0.03
8	ಚಂದ್ರಂಪಳ್ಳಿ	1.21
9	ಭದ್ರಾ ಅಣೆಕಟ್ಟು (ಗೋಂದಿ)	3.37
10	ಚಿತವಾಡಗಿ	0.02
11	ಧರ್ಮ	0.50
12	ಗಾಯತ್ರಿ	0.97
13	ಹಗರಿಬೊಮ್ಮನಹಳ್ಳಿ	2.00
14	ಹತ್ತಿಕುಣಿ	0.35
15	ಜಂಬದಹಳ್ಳ	0.34
16	ಕಳಾಸ್‌ಕೋಪ್	0.02
17	ಕನಕನಾಲಾ	0.23
18	ಕೊಳ್ಳಿ ವಿಯರ್	9.50
19	ನಾಗಥಾಣಾ	0.08
20	ನಾರಾಯಣಪುರ (ಮಧ್ಯಮ)	0.50
21	ನಾರೀಹಳ್ಳ	0.81
22	ರಾಮನಹಳ್ಳಿ	0.21
23	ಸೌದಾಗರ್	0.21

24	ಮುಲ್ಲಾಮಾರಿ ಮೇಲ್ದಂಡೆ	0.75
25	ಕೃಷ್ಣರಾಜಸಾಗರ	49.44
26	ನುಗು ಜಲಾಶಯ	5.44
27	ಬೈರಮಂಗಳಾ	0.75
28	ಚಿಕ್ಕಹೊಳೆ	0.38
29	ಗುಂಡಾಲ್	0.97
30	ಹೆಬ್ಬಳ್ಳ	0.42
31	ಕಣ್ವ	0.84
32	ಮಂಗಳಾ	0.53
33	ಮಾರ್ಕೋನಹಳ್ಳಿ	2.40
34	ನಲ್ಲೂರು ಅಮ್ಮಣ್ಣಿಕೆರೆ	0.23
35	ಸುವರ್ಣಾವತಿ	1.26
36	ಚಿಕ್ಲಿಹೊಳೆ	0.18
37	ಬಾಚಂಕಿ	0.38
38	ತೀತಾ	0.24
39	ಬೆಣ್ಣೆತೊರಾ	5.30
40	ಹಿಪ್ಪರಗಿ	6.00
41	ಮಲಪ್ರಭಾ	37.72
42	ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿ	123.09
43	ಕೃಷ್ಣಾ ಮೇಲ್ದಂಡೆ ಯೋಜನೆ, ನಾರಾಯಣಪುರ	37.64
44	ತುಂಗಾ ಮೇಲ್ದಂಡೆ ಯೋಜನೆ	3.24
45	ಮಾರ್ಕಂಡೇಯ	4.00
46	ಕಾರಂಜಾ	7.69
47	ಅಮರ್ಜಾ	1.55
48	ಗಂಡೋರಿನಾಲಾ	1.89
49	ಹಿರೇಹಳ್ಳ	1.68
50	ಮುಲ್ಲಾಮಾರಿ ಕೆಳದಂಡೆ	1.74
51	ಮಸ್ಕಿನಾಲಾ	0.46
52	ಹರಿನಾಲಾ	0.49
53	ಹಾರಂಗಿ	8.50
54	ಹೇಮಾವತಿ	37.10
55	ಕಬಿನಿ	19.52

56	ಯಗಚಿ	3.16
57	ಅರ್ಕಾವತಿ	1.59
58	ಇಗ್ಗಲೂರು	0.18
59	ಮಂಚನಬೆಲೆ	1.22
60	ತಾರಕ	3.94
61	ಉಡತೊರೆಹಳ್ಳ	0.67
62	ಚುಲ್ಕಿನಾಲಾ	0.94
63	ವಾಟೆಹೊಳೆ	1.50
	ಒಟ್ಟು	**649.55**

ಪ್ರದೇಶಾಭಿವೃದ್ಧಿ ಮಂಡಳಿಗಳು

5 ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ)

ಶ್ರೀ ಗೋವಿಂದ ಎಂ ಕಾರಜೋಳ(ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು)

ಅ) ರಾಜ್ಯದಲ್ಲಿ ಎಷ್ಟು ಪ್ರದೇಶಾಭಿವೃದ್ಧಿ ಮಂಡಳಿಗಳಿವೆ?

ಯೋಜನಾ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ 3 ಪ್ರದೇಶಾಭಿವೃದ್ಧಿ ಮಂಡಳಿಗಳಿವೆ: ಅವುಗಳೆಂದರೆ

1) ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ.
2) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ.
3) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ.

ಆ) ಯಾವ ಪ್ರದೇಶಾಭಿವೃದ್ಧಿ ಮಂಡಳಿಗೆ ಎಷ್ಟು ವಿಧಾನಸಭಾ ಮತಕ್ಷೇತ್ರಗಳು ಒಳಪಡುತ್ತವೆ? ಮತಕ್ಷೇತ್ರದ ಹೆಸರುಗಳ ವಿವರಗಳನ್ನು ನೀಡುವುದು?

ಮಂಡಳಿಗಳ ವ್ಯಾಪ್ತಿಯಲ್ಲಿ ಬರುವ ವಿಧಾನ ಸಭಾ ಕ್ಷೇತ್ರಗಳ ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.

ಇ) 2007–08, 2008–09, 2009–10ನೇ ಸಾಲಿನಲ್ಲಿ ಪ್ರತಿ ಪ್ರದೇಶಾಭಿವೃದ್ಧಿ ಮಂಡಳಿಗೆ ನಿಗಧಿ ಪಡಿಸಿದ ಅನುದಾನ ಮತ್ತು ಬಿಡುಗಡೆ ಮಾಡಿದ ಅನುದಾನ ಎಷ್ಟು?

ಮಂಡಳಿಗಳಿಗೆ ನಿಗಧಿಪಡಿಸಿದ ಮತ್ತು ಬಿಡುಗಡೆ ಮಾಡಿದ ಅನುದಾನದ ವಿವರಗಳನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ.

ಈ) ಪ್ರಸಕ್ತ ವರ್ಷದಲ್ಲಿ ಬಯಲುಸೀಮೆ ಅಭಿವೃದ್ಧಿ ಮಂಡಳಿಯು ಎಷ್ಟು ಅನುದಾನದ ಬೇಡಿಕೆ ಇಟ್ಟಿದೆ? ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು?

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು ಈ ಬಗ್ಗೆ ಯಾವುದೇ ಅನುದಾನದ ಬೇಡಿಕೆಯನ್ನು ಸಲ್ಲಿಸಿರುವುದಿಲ್ಲ. ಆದಾಗ್ಯೂ ಪ್ರಸಕ್ತ ಸಾಲಿನಲ್ಲಿ